ಒ ಎಸ್ 52/2023 ಡಿ.ಡಬ್ಲ್ಯೂ:1

ಇಂದು ದಿಃ 18.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ದ್ವಿತೀಯ ಪಿ ಯು ಸಿ ಓದಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಇಂಗ್ಲೀಷ್ ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ವಾದಿ ನಮ್ಮ ಊರಿನವರು. 1ನೇ ಪ್ರತಿವಾದಿ ಶಿವಮ್ಮ ವಾದಿಯ ತಾಯಿ ಎಂದರೆ ಸರಿ. 5ನೇ ಪ್ರತಿವಾದಿ ನಂಜಮಣಿ ವಾದಿಯ ಅಕ್ಕ. 2ನೇ ಪ್ರತಿವಾದಿಯ ಗಂಡ 3 ಮತ್ತು 4 ನೇ ಪ್ರತಿವಾದಿಗಳ ತಂದೆ ಲೇಟ್ ಮಾದಪ್ಪ ಗೌರಮ್ಮನ ಅಣ್ಣ. ನಂಜಪ್ಪ ಸಹ ಗೌರಮ್ಮನ ಅಣ್ಣ.

ನಾನು ಆಸ್ತಿ ಖರೀದಿಸುವಾಗ ಈ ಮೇಲೆ ಹೇಳಿದ ವ್ಯಕ್ತಿಗಳು ಪರಸ್ಪರ ಅಣ್ಣ ತಮ್ಮಂದಿರು ಎಂದು ಗೊತ್ತಿತ್ತು. ನಾನು ಆಸ್ತಿ ಖರೀದಿಸುವಾಗ ವಾದಿಯ ಅಣ್ಣ ತಮ್ಮಂದಿರು ಮತ್ತು ತಂದೆಯನ್ನು ಕೇಳಿದ್ದೆ. ಕ್ರಯ ಪತ್ರಕ್ಕೆ ಅವರ ಸಹಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ನಾನು ಖರೀದಿಸಿದ ಆಸ್ತಿ ನಂಜಪ್ಪನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿ ಆದ ಕಾರಣ ಹೆಣ್ಣು ಮಕ್ಕಳಿಗೆ ಮತ್ತು ಅವರ ತಂದೆಗೆ ಹಕ್ಕು ಇತ್ತು ಎಂದರೆ ಸರಿ. ಅವರಿಗೂ ಸಹ ಹಕ್ಕು ಇದ್ದ ಕಾರಣ ವಾದಿ ಮತ್ತು ಖರೀದಿದಾರರ ಅಣ್ಣ ತಮ್ಮಂದಿರನ್ನು ಕೇಳಬಹುದುದಿತ್ತು ಎಂದರೆ ನಾನು ಕೇಳಿಲ್ಲ ಎನ್ನುತ್ತಾರೆ. ನಾನು ಖರೀದಿಸಿದ ಆಸ್ತಿ ಪಿತ್ರಾರ್ಜಿತ ಆಸ್ತಿ ಆದ ಕಾರಣ ವಾದಿ, 1 ಮತ್ತು 5ನೇ ಪ್ರತಿವಾದಿಗಳಿಗೆ ಆ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ಅವರಿಗೆ ಹಕ್ಕು ಇದ್ದರೂ ಸಹ ಹಕ್ಕು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.